# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6012/2014/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 29/1/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ವಿನಯ್‌ಚಂದ್ರ, ವಲಯ ಅರಣ್ಯಾಧಿಕಾರಿ, ಯಸಳೂರು ವಲಯ, ಸಕಲೇಶಪುರ ತಾಲ್ಲೂಕು, (2) ಶ್ರೀ.ಹೆಚ್.ಸಿ.ರಮೇಶ್, ಉಪ ವಲಯ ಅರಣ್ಯಾಧಿಕಾರಿ, ಯಸಳೂರು ವಲಯ, ಸಕಲೇಶಪುರ ತಾಲ್ಲೂಕು, ಮತ್ತು (3) ಶ್ರೀ.ಬಿ.ವಿ.ಶಿವರಾಮು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಸಳೂರು ವಲಯ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ (ಹಾಲಿ ನಿವೃತ್ತ), – ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1. ಶ್ರೀ.ಹೇಮಂತ್ ಬಿನ್ ನಾಗಯ್ಯ, ಮಾಗಳ ಕೊಪ್ಪಲು, ಆಲದಹಳ್ಳಿ ಅಂಚೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ವಿನಯ್‌ಚಂದ್ರ, ವಲಯ ಅರಣ್ಯಾಧಿಕಾರಿ, ಯಸಳೂರು ವಲಯ, ಸಕಲೇಶಪುರ ತಾಲ್ಲೂಕು, (2) ಶ್ರೀ.ಹೆಚ್.ಸಿ.ರಮೇಶ್, ಉಪ ವಲಯ ಅರಣ್ಯಾಧಿಕಾರಿ, ಯಸಳೂರು ವಲಯ, ಸಕಲೇಶಪುರ ತಾಲ್ಲೂಕು, ಮತ್ತು (3) ಶ್ರೀ.ಬಿ.ವಿ.ಶಿವರಾಮು, ಉಪ ಅರಣ್ಯ ಸಂರಕ್ಷಣಾಧಿಕಾರಿ, ಯಸಳೂರು ವಲಯ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ (ಹಾಲಿ ನಿವೃತ್ತ) (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಶ್ರೀಮತಿ.ತಂಗ್ಯಮ್ಮ ಕೋಂ ಕೆ.ವಿ.ಸಿದ್ದೇಗೌಡ, ಸಂತಹಳ್ಳಿ ಯಸಳೂರು ಹೋಬಳಿ, ಸಕಲೇಶಪುರ ತಾಲ್ಲೂಕು ಇವರಿಗೆ ಸೇರಿರುವ 2 ಹೆಬ್ಬಲಸು ಮರಗಳನ್ನು ರೂ.30,000/- ಕ್ರಯ ನಿಗದಿ ಪಡಿಸಿ ಪೂರ್ತಿ ಹಣವನ್ನು ಶ್ರೀಮತಿ.ತಂಗ್ಯಮ್ಮರವರಿಗೆ ಕೊಟ್ಟು ವ್ಯಾಪಾರ ಮಾಡಿಕೊಂಡಿರುತ್ತಾರೆ. ನಂತರದಲ್ಲಿ ವಲಯ ಅರಣ್ಯಾಧಿಕಾರಿಯವರಾದ ಶ್ರೀ.ವಿನಯಚಂದ್ರ ಇವರನ್ನು ಸಂಪರ್ಕಿಸಲಾಗಿ ಮರವನ್ನು ಕಡಿಯುವಂತೆ ತಿಳಿಸಿದ್ದು, ನಂತರ ಊರಿನವರು ಅರ್ಜಿ ನೀಡಿದ ಕಾರಣ ಮರವನ್ನು ಅಮಾನತ್ತು ಪಡಿಸಿ ತಂಗ್ಯಮ್ಮರವರ ಹೆಸರಿಗೆ ಸ್ವಂತ ಉಪಯೋಗಕ್ಕಾಗಿ ಎಂದು ದಂಡ ಕಟ್ಟಿಸಿ ಮರವನ್ನು ಬಿಟ್ಟುಕೊಡುವುದಾಗಿ ತಿಳಿಸಿ ಮರವನ್ನು ಯಸಳೂರು ವಲಯ ಅರಣ್ಯಾಧಿಕಾರಿಗಳ ಕಚೇರಿ ಹತ್ತಿರ ತೆಗೆದುಕೊಂಡು ಹೋಗಿರುತ್ತಾರೆ. ನಂತರದಲ್ಲಿ ವಿನಯಚಂದ್ರರವರೇ ಮರವನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿರುವುದು ತಿಳಿದುಬಂದಿರುತ್ತದೆ. ದಾಖಲಾತಿಯನ್ನು ಪರಿಶೀಲಿಸಿದಾಗ,

ದಾಖಲಾತಿ ಪ್ರಕಾರ ಪರ್ಮಿಟ್ ನಂ.939696 ದಿ.22/12/12 ರಂದು ಲಾರಿ ಸಂ.ಕೆಎ 46 9786 ರಲ್ಲಿ ಸಕಲೇಶಪುರಕ್ಕೆ ತೆಗೆದುಕೊಂಡು ಹೋಗಿರುತ್ತಾರೆಂದು ಪರ್ಮಿಟ್‌ನ ಮೂಲದಿಂದ ತಿಳಿದುಬಂದಿರುತ್ತದೆ. ದೂರುದರರಾಗಲೀ ಅಥವಾ ತಂಗ್ಯಮ್ಮನವರಾಗಲೀ ಮರವನ್ನು ತೆಗೆದುಕೊಂಡು ಹೋಗಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸಕಲೇಶಪುರ ತಾಲ್ಲೂಕು, ಸಂತೇಹಳ್ಳಿ ಗ್ರಾಮದ ಸ.ನಂ.19/11 ರ ಹಿಡುವಳಿ ಪ್ರದೇಶವು ಶ್ರೀಮತಿ.ತಂಗ್ಯವ್ವ ಎಂಬುವರಿಗೆ ಸೇರಿದ್ದಾಗಿದೆ. ಸದರಿ ಜಮೀನಿನಲ್ಲಿ ಬೆಳೆದುನಿಂತಿದ್ದ 2 ಹೆಬ್ಬಲಸು ಮರಗಳನ್ನು ಭೂಮಾಲೀಕರು ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಪರವಾನಗಿ ಇಲ್ಲದೆ ಕಡಿಸಿರುವ ಕಾರಣ ಸದರಿ ಮಾಲನ್ನು ಅಮಾನತ್ತುಪಡಿಸಿ, ಯಸಳೂರು ವಲಯದವರು ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿರುತ್ತಾರೆ. ನಂತರ ತಂಗ್ಯಮ್ಮ ರವರು ಸ್ವ-ಇಚ್ಛೆಯಿಂದ ಹೇಳಿಕೆ ನೀಡಿ ಸರಕಾರ ನಿಗದಿ ಪಡಿಸುವ ಬೆಲೆ ಮತ್ತು ದಂಡವನ್ನು ತೆರಲು ಸಿದ್ದರಿರುವುದಾಗಿ ಮತ್ತು ಮರವನ್ನು ತನಗೆ ಬಿಟ್ಟುಕೊಡಬೇಕೆಂದು ಕೇಳಿಕೊಂಡ ಕಾರಣ ಅದನ್ನು ಮಾನ್ಯ ಉಪ ಸಂರಕ್ಷಣಾಧಿಕಾರಿಯವರು ಒಪ್ಪಿ, ದಂಡ ಸ್ವೀಕರಿಸಿ ಮರವನ್ನು ಭೂಮಾಲೀಕರಿಗೆ ಬಿಟ್ಟುಕೊಡುವಂತೆ ಆದೇಶಿಸಿರುತ್ತಾರೆ. ದೂರು ಅರ್ಜಿದಾರರಿಗೂ ಮತ್ತು ಸದರಿ ಮರಕ್ಕೂ ಯಾವುದೇ ಸಂಬಂಧವಿಲ್ಲವೆಂದು ಹೇಳಿರುತ್ತಾರೆ.

4. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿ, ದೂರಿನಲ್ಲಿರುವ ಅಂಶಗಳನ್ನೇ ಪುನರುಚ್ಛರಿಸಿ, ಮುಂದುವರೆದು ಎದುರುದಾರರು 2 ವರ್ಷದೊಳಗೆ ಯಸಳೂರು ಅರಣ್ಯ ಅಧಿಕಾರಿಯಾಗಿ ಮಾಡಿರುವ ಅಕ್ರಮದ ಬಗ್ಗೆ ವಿವರಣೆಯನ್ನು ಸಲ್ಲಿಸಿರುವುದಾಗಿ, ಆದ್ದರಿಂದ, ಅವರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿದ ಕಾರಣ, ದೂರುದರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾಸನ ಇವರಿಗೆ ಆದೇಶಿಸಲಾಗಿತ್ತು.

5. ಪೊಲೀಸ್ ಅಧೀಕ್ಷಕರು, ಲೋಕಾಯುಕ್ತ, ಹಾಸನ ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯ ನೀಡಿರುವುದು ಕಂಡುಬರುತ್ತದೆ.

"ಮೇಲ್ಕಂಡ ಅಂಶಗಳಿಂದ, ಆರೋಪಿತ ಶ್ರೀ.ವಿನಯಚಂದ್ರ, ವಲಯ ಅರಣ್ಯಾಧಿಕಾರಿ, ಎಸಳೂರು ಅರಣ್ಯ ವಲಯ, ಸಕಲೇಶಪುರ ಇವರು ಫಿರ್ಯಾದಿ ಶ್ರೀ.ಹೇಮಂತ್‌ರವರಿಗೆ ಸೇರಿದ 9 ಹೆಬ್ಬಲಸಿನ ಮರಗಳನ್ನು ಅಮಾನತ್ತು ಪಡಿಸಿಕೊಂಡು ನಂತರ ಅವರಿಂದ ಒಟ್ಟು ರೂ.25,000/- ಪಡೆದು ಒಂದು ತಿಂಗಳ ನಂತರ ಬನ್ನಿ, ರಹದಾರಿ ಮಾಡಿಕೊಡುತ್ತೇನೆಂದು ಹೇಳಿ ಕೇವಲ 25,654/- ಗಳನ್ನು ಮಾತ್ರ ಇಲಾಖೆಗೆ ಕಟ್ಟಿಕೊಂಡು ಮರ ಸರ್ಕಾರಕ್ಕೆ ಅಮಾನತ್ತು ಪಡಿಸಿದ ಮೇಲೆ ಪೂರ್ತಿ ಮರಕ್ಕೆ ಹಣ ಕಟ್ಟಬೇಕಾಗುತ್ತದೆ. ಆದರೆ, ಅರಣ್ಯ ಇಲಾಖೆಯವರು ಬರಿ 1.077 ಮೀಟರ್ ಮಾತ್ರ ಮೌಲ್ಯ ತೆರಿಗೆ ಮತ್ತು ದಂಡವನ್ನು ವಸೂಲಿ ಮಾಡಿ ತೀರ್ಮಾನ ಮಾಡಿ ನಂತರ ಫಿರ್ಯಾದುದಾರರನ್ನು ಹೆದರಿಸಿ ಜೈಲಿಗೆ ಕಳುಹಿಸುವುದಾಗಿ ಹೇಳಿ ಹೆದರಿಸಿ ಆ ನಂತರ ಶ್ರೀಮತಿ.ತಂಗ್ಯಮ್ಮರವರು ಸದರಿ ಮರಗಳನ್ನು ಕೊಂಡೊಯ್ದಿರುವುದಾಗಿ ಶ್ರೀ.ಹೆಚ್.ಸಿ.ರಮೇಶ್,

ಉಪ ವಲಯ ಅರಣ್ಯಾಧಿಕಾರಿ, ವನಗೂರು ಶಾಖೆ, ಎಸಳೂರು ವಲಯ, ಸಕಲೇಶಪುರ ತಾಲ್ಲೂಕು ಇವರಿಂದ ನಕಲಿ ರಹದಾರಿಯನ್ನು ಸಿದ್ಧಪಡಿಸಿ ದೂರುದಾರರಿಗೆ ಮೋಸಮಾಡಿರುವುದು ವಿಚಾರಣೆಯಿಂದ ಸ್ಪಷ್ಟವಾಗಿದ್ದು, ಆದ್ದರಿಂದ, ಎದುರುದಾರರಾದ ಶ್ರೀ.ವಿನಯಚಂದ್ರ ಮತ್ತು ಹೆಚ್.ಸಿ.ರಮೇಶ್ ಇವರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಹುದಾಗಿರುತ್ತದೆಯೆಂದು ಅಭಿಪ್ರಾಯ ಪಡುತ್ತೇನೆ" ಎಂದು ವರದಿ ನೀಡಿರುವುದು ಕಂಡುಬರುತ್ತದೆ.

6. ತನಿಖಾ ವರದಿಯ ಮೇಲೆ 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಲೋಕಾಯುಕ್ತ ಎಸ್.ಪಿ.ಯವರು ನೀಡಿರುವ ವರದಿಯಲ್ಲಿ ಅತ್ಯಂತ ಪ್ರಮುಖವಾದ ದಾಖಲೆಗಳ ಬಗ್ಗೆ ಗಮನ ಹರಿಸಿರುವುದಿಲ್ಲ. ಸದರಿ 9 ನಾಟಾಗಳಿಗೆ ಸಂಬಂಧಿಸಿದಂತೆ ದಿ.23/7/12 ರಂದು ಪ್ರಕರಣವನ್ನು ದಾಖಲಿಸಲಾಗಿದೆ ಮತ್ತು ನಾಟಾಗಳನ್ನು ಅಮಾನತ್ತುಪಡಿಸಿಕೊಳ್ಳಲಾಗಿವೆ. ದೂರುದಾರರಾದ ಶ್ರೀ.ಹೇಮಂತ್ ಇವರು ದೂರಿನಲ್ಲಿ ಎಲ್ಲಿಯೂ ಸಹ ಕ್ರಯ ಮಾಡಿಕೊಂಡ ಬಗ್ಗೆ ಹೇಳಿರುವುದಿಲ್ಲ ಹಾಗೂ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಇವೆಲ್ಲವನ್ನು ಪರಿಶೀಲಿಸಿದಾಗ, ದೂರುದಾರರಾದ ಶ್ರೀ.ಹೇಮಂತ್ ಬಿನ್ ನಾಗಯ್ಯರವರು 2 ಹೆಬ್ಬಲಸು ಮರಗಳ 9 ನಾಟಾಗಳನ್ನು ವಶಪಡಿಸಿಕೊಂಡ 2 ವರ್ಷಗಳ ನಂತರ ಶ್ರೀಮತಿ.ತಂಗ್ಯಮ್ಮರವರಿಂದ ಅಗ್ರಿಮೆಂಟ್ ಮಾಡಿಸಿಕೊಂಡಂತೆ ಖೋಟಾ ಕ್ರಯಪತ್ರವನ್ನು ಸೃಷ್ಟಿ ಮಾಡಿರುವುದು ಎದ್ದುಕಾಣುತ್ತದೆ. ಆದ್ದರಿಂದ, ಅವರು ಕರ್ತವ್ಯಲೋಪವನ್ನಾಗಲೀ ಅಥವಾ ಅಧಿಕಾರ ದುರ್ಬಳಕೆಯನ್ನು ಮಾಡಿರುವುದಿಲ್ಲ. ದೂರುದಾರರ ದೂರು ಸತ್ಯಕ್ಕೆ ದೂರವಾಗಿರುತ್ತದೆಯೆಂದು ಹೇಳಿರುತ್ತಾರೆ.

7. 2ನೇ ಎದುರುದಾರರು ತನ್ನ ಆಕ್ಷೆಪಣೆಯಲ್ಲಿ ದೂರುದಾರರು ಶ್ರೀಮತಿ.ತಂಗ್ಯಮ್ಮರವರಿಂದ ಮರವನ್ನು ಕೊಂಡುಕೊಂಡಿರುವ ಬಗ್ಗೆ ಯಾವುದೇ ದಾಖಲೆ ಪತ್ರಗಳನ್ನು ಹಾಜರು ಪಡಿಸಿರುವುದಿಲ್ಲ. ದೂರುದಾರರು ಇಲಾಖೆಗೆ ಹಣ ಕಟ್ಟಿರುವ ಬಗ್ಗೆ ಯಾವುದೇ ರಸೀದಿಯನ್ನು ಹಾಜರು ಪಡಿಸಿರುವುದಿಲ್ಲ. ಈಗಾಗಲೇ ಸದರಿ ದೂರಿಗೆ ಸಂಬಂಧಿಇದಂತೆ ಅರಣ್ಯ ಇಲಾಖೆ, ಜಾಗೃತ ದಳದವರು ವಿಚಾರಣೆ ಕೈಗೊಂಡು ಆರೋಪಿಯ ವಿರುದ್ಧ ಆರೋಪವನ್ನು ಸಾಬೀತು ಮಾಡಿರುತ್ತಾರೆಂದು ವರದಿಯಲ್ಲಿ ಹೇಳಲಾಗಿದೆ. ಆದರೆ, ದೂರುದಾರರು ಈ ಆರೋಪವು ಸಾಬೀತಾಗಿರುವುದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಮೇಲಾಧಿಕಾರಿಗಳ ಲಿಖಿತ ಆದೇಶದ ಮೇರೆಗೆ ದಿ.26/12/12 ರಂದು ಅಲ್ಲಿ ಹಾಜರಿದ್ದ ಶ್ರೀಮತಿ.ತಂಗ್ಯಮ್ಮ ರವರಿಗೆ 9 ಹೆಬ್ಬಲಸು ನಾಟಾಗಳ ರಹದಾರಿಯನ್ನು ವಿತರಿಸಿರುತ್ತಾರೆ. ಯಾವುದೇ ನಕಲಿ ರಹದಾರಿ ಪತ್ರವನ್ನು ತಯಾರಿಸಿರುವುದಿಲ್ಲವೆಂದು ಹೇಳಿರುತ್ತಾರೆ.

8. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, 2 ಹೆಬ್ಬಲಸು ಮರಳಿದ್ದ ಭೂಮಿಯ ಹಿಡುವಳಿದಾರರಾದ ತಂಗ್ಯಮ್ಮ ಇವರ ಮಗ ಚಿನ್ನಪ್ಪ ತನ್ನ ಹೇಳಿಕೆಯಲ್ಲಿ ಅರಣ್ಯ ಇಲಾಖೆಯವರು ಅಮಾನತ್ತು ಪಡಿಸಕೊಂಡ ಮರದ ನಾಟಾಗಳನ್ನು ಅರಣ್ಯ ಇಲಾಖೆಯಿಂದ ಅವರಾಗಲೀ ಅಥವಾ ಅವರ ತಾಯಿಯಾಗಲೀ ಪಡೆದಿರುವುದಿಲ್ಲವೆಂದು ಹೇಳಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ, ತನಿಖಾಧಿಕಾರಿಯ ವರದಿಯಲ್ಲಿರುವ ಅಂಶಗಳು

ಮೇಲ್ನೋಟಕ್ಕೆ ಸರಿಯೆಂದು ಕಂಡುಬರುತ್ತದೆ. ತನಿಖಾಧಿಕಾರಿ ವರದಿಯ ಜೊತೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ದಿ.22/4/14 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಹಾಸನ ಇವರು ಶ್ರೀ.ವಿನಯಚಂದ್ರ, ವಲಯ ಅರಣ್ಯಾಧಿಕಾರಿ ಹಾಗೂ ಹೆಚ್.ಸಿ.ರಮೇಶ್, ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ ನಾಟಾಗಳನ್ನು ಎಲ್ಲಿಗೆ ಸಾಗಿಸಲಾಗಿದೆ ಎನ್ನುವುದನ್ನು ತನಿಖೆಗೆ ಒಳಪಡಿಸಬೇಕೆಂದು ಅಭಿಪ್ರಾಯ ಪಟ್ಟು, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಜಾಗೃತ) ಬೆಂಗಳೂರು ಇವರಿಗೆ ವರದಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಸದರು ವರದಿಯ ಆಧಾರದಲ್ಲಿ ಎದುರುದಾರರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳು ಕಡತದಲ್ಲಿ ಕಂಡುಬರದ ಕಾರಣ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಹಾಸನ ಇವರು ದಿ.22/4/14 ರಂದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು, ಇವರಿಗೆ ಸಲ್ಲಿಸಿರುವ ವರದಿಯ ಮೇಲೆ ಎದುರುದಾರರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ವರದಿ ನೀಡುವಂತೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತದಳ). ಬೆಂಗಳೂರು ಇವರಿಗೆ ಆದೇಶಿಸಲಾಗಿತ್ತು.

9. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ), ಬೆಂಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಪ್ರಕರಣದಲ್ಲಿ ಒಳಗೊಂಡಿರುವ ಹೆಬ್ಬಲಸಿನ ಜಾತಿಯ 9–3.877 ಘನ ಮೀಟರ್ ನಾಟಾವನ್ನು ಎಲ್ಲಿಗೆ ಸಾಗಿಸಲಾಗಿದೆ ಎಂಬುದು ತನಿಖಾ ಸಂದರ್ಭದಲ್ಲಿ ಕಂಡುಬಂದಿರುವುದಿಲ್ಲ. ಆದುದರಿಂದ ತನಿಖಾ ವರದಿಯ ಜೊತೆ ಶ್ರೀ.ವಿನಯಚಂದ್ರ, ವಲಯ ಅರಣ್ಯಾಧಿಕಾರಿ, ಶ್ರೀ.ಬಿ.ವಿ.ಶಿವರಾಮ ಹಾಗೂ ಶ್ರೀ.ಹೆಚ್.ವಿ.ರಮೇಶ, ಉಪ ವಲಯ ಅರಣ್ಯಾಧಿಕಾರಿ ಇವರುಗಳು ಗಂಭೀರ ಕರ್ತವ್ಯಲೋಪಗಳನ್ನು ಎಸಗಿರುವುದು ಮೇಲ್ನೋಟಕ್ಕೆ ತಿಳಿದುಬಂದಿರುವುದರಿಂದ, ಸದರಿ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ತಕ್ಷಣವೇ ಶಿಸ್ತು ಕ್ರಮ ಜರುಗಿಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಹಾಸನವೃತ್ತ ಇವರಿಗೆ ಶಿಫಾರಸ್ಸು ಮಾಡಿ ಈ ಕುರಿತು ಅವರ ಕಚೇರಿಗೆ ಮಾಹಿತಿ ಒದಗಿಸುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಹಾಸನ ಇವರಿಗೆ ದಿ.5/6/2014 ರ ಪತ್ರದಲ್ಲಿ ತಿಳಿಸುತ್ತಾ, ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವೃತ್ತ, ಹಾಸನ ಇವರಿಗೆ ಕಳುಹಿಸಲಾಗಿತ್ತು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಇವರಿಂದ ವರದಿ ಪ್ರಾಪ್ತವಾದ ಕೂಡಲೇ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿ ಕಚೇರಿಗೆ ಕಳುಹಿಸುವಂತೆ ತಿಳಿಸಲಾಗಿತ್ತು. ನಂತರದಲ್ಲಿ ನೆನಪೋಲೆ ಹಾಕಿದ್ದರೂ ಸಹ ಅವರಿಂದ ವರದಿ ಪ್ರಾಪ್ತವಾಗದೇ ಇದ್ದು, ದಿ.8/6/17 ರಂದು ಅವರ ಕಚೇರಿಯಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಹಾಸನ ಇವರಿಗೆ ದೂರವಾಣಿ ಮೂಲಕ ಸಂದೇಶ ಕಳುಹಿಸಲಾಗಿರುವಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗ, ಹಾಸನ ಇವರು ಶ್ರೀ.ವಿನಯಚಂದ್ರ, ಅಂದಿನ ವಲಯ ಅರಣ್ಯಾಧಿಕಾರಿ, ಯಸಳೂರು ವಲಯ, ಹಾಗೂ ಹೆಚ್.ಸಿ.ರಮೇಶ, ಅಂದಿನ ಉಪ ವಲಯ ಅರಣ್ಯಾಧಿಕಾರಿ, ಯಸಳೂರು ಶಾಖೆ, ಇವರ ವಿರುದ್ಧ ಕರಡು ದೋಷಾರೋಪಣ ಪಟ್ಟಿಯನ್ನು ತಯಾರಿಸಿ,

ಸಲ್ಲಿಸಿದ್ದು, ಮತ್ತೊಬ್ಬ ಆರೋಪಿತ ಶ್ರೀ.ಬಿ.ವಿ.ಶಿವರಾಮ ಅಂದಿನ ಯಸಳೂರು ಶಾಖೆಯ ಉಪ ವಲಯ ಅರಣ್ಯಾಧಿಕಾರಿಯ ಮೇಲೆ ಕರಡು ದೋಷಾರೋಪಣ ಪಟ್ಟಿ ತಯಾರಿಸಿ ಸಲ್ಲಿಸಿರುವುದಿಲ್ಲ. ಆ ಬಗ್ಗೆ ಕಚೇರಿಯಿಂದ ದಿ.27/6/17 ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವಿಭಾಗ, ಹಾಸನ ಇವರ ವಿವರಣೆಯನ್ನು ಕೇಳಲಾಗಿರುತ್ತದೆ. ಶ್ರೀ.ಬಿ.ವಿ.ಶಿವರಾಮ. ಉಪ ವಲಯ ಅರಣ್ಯಾಧಿಕಾರಿ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ದೋಷಾರೋಪಣ ಪಟ್ಟಿಯನ್ನು ತಯಾರಿಸಿರುವುದಿಲ್ಲವೆಂಬ ಅಂಶವನ್ನು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ.ವಿನಯಚಂದ್ರ, ವಲಯ ಅರಣ್ಯಾಧಿಕಾರಿ, ಹಾಗೂ ಶ್ರೀ.ಹೆಚ್.ಸಿ.ರಮೇಶ್, ಉಪ ವಲಯ ಅರಣ್ಯಾಧಿಕಾರಿ ಹಾಗೂ ಮೋಜಣಿದಾರರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೋರಲಾಗಿದೆಯೆಂದು ತಿಳಿಸಿರುತ್ತಾರೆ.

10. ವರದಿಯನ್ನು ಪರಿಶೀಲಿಸಿದಾಗ, ಈ ಪ್ರಕರಣದ ಎದುರುದಾರರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿರುವುದು ಕಂಡುಬರುತ್ತದೆ. ಶ್ರೀ.ಬಿ.ವಿ.ಶಿವರಾಮ, ಉಪ ವಲಯ ಅರಣ್ಯಾಧಿಕಾರಿ, ಇವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆದ್ದರಿಂದ, ಶ್ರೀ.ಬಿ.ವಿ.ಶಿವರಾಮ, ಉಪ ವಲಯ ಅರಣ್ಯಾಧಿಕಾರಿ, ಇವರನ್ನು ಈ ಪ್ರಕರಣದಲ್ಲಿ ಎದುರುದಾರರನ್ನಾಗಿ ಮಾಡಿ ಅವರಿಂದ ಆಕ್ಷೇಪಣೆಯನ್ನು ತರಿಸಲಾಗಿರುತ್ತದೆ.

11. ಎದುರುದಾರರು ತನ್ನ ಆಕ್ಷೇಪಣೆಯಲ್ಲಿ 2011 ರಿಂದ 2015 ರವರೆಗೆ ಅವರು ಉಪ ವಲಯ ಅರಣ್ಯ ಅಧಿಕಾರಿಯಾಗಿ ಯಸಳೂರು ಶಾಖೆಯಲ್ಲಿ ಸರ್ಕಾರಿ ಕೆಲಸ ನಿರ್ವಹಿಸುತ್ತಿದ್ದುದು ಸತ್ಯವಾಗಿರುತ್ತದೆ. ಆಗಿನ ಸಂದರ್ಭದಲ್ಲಿ ಅಂದರೆ 2014ನೇ ಇಸವಿಯಲ್ಲಿ ಹೇಮಂತ್ ಇವರು ನೀಡಿರುವ ದೂರು ಅರ್ಜಿಯ ಸಂಬಂಧ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಹಾಸನ ಇವರು ವಲಯ ಅರಣ್ಯಾಧಿಕಾರಿಗಳು, ಯಸಳೂರು ವಲಯ ಕಚೇರಿಗೆ ನೀಡಿದ ದಿನಚರಿಯನ್ನು ಪರಿಶೀಲಿಸಿ ದಿ.26/12/2012 ರಂದು 3ನೇ ಎದುರುದಾರರು ಕರ್ತವ್ಯ ನಿರ್ವಹಿಸಿದ್ದಾರೆಂದು ಆದರೆ, ವಲಯ ಅರಣ್ಯಾಧಿಕಾರಿಗಳು ರಜೆ ಪಡೆದಿದ್ದಾರೆಂದು ತಿಳಿಸುವ ಸಂಬಂಧ ದಿ.26/12/12 ರ ಬೆಳಗ್ಗಿನಿಂದ ಸಂಜೆ 4.00 ಗಂಟೆಯವರೆಗೆ ಸರ್ಕಾರಿ ಕೆಲಸವನ್ನು ನಿರ್ವಹಿಸಿರುತ್ತಾರೆ. 4.00 ಗಂಟೆ ಸಮಯದಲ್ಲಿ ಅವರ ಸ್ವಂತ ಅಣ್ಣ ಪಾರ್ಶ್ವವಾಯು ರೋಗಕ್ಕೆ ತುತ್ತಾಗಿರುತ್ತಾರೆಂಬ ವಿಷಯ ದೂರವಾಣಿ ಮೂಲಕ ತಿಳಿದು ಬಂದದ್ದರಿಂದ. ಯಸಳೂರು ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ.ವಿನಯ್‌ಚಂದ್ರ, ವಲಯ ಅರಣ್ಯಾಧಿಕಾರಿ ಇವರಿಗೆ ದೂರವಾಣಿ ಮುಖಾಂತರ ತಿಳಿಸಿ ಹಾಸನ ಆಸ್ಪತ್ರೆಗೆ ಹೋಗಿ ಪುನಃ ಅದೇದಿನ ರಾತ್ರಿ 11.00 ಗಂಟೆಗೆ ಕೇಂದ್ರ ಸ್ಥಾನಕ್ಕೆ ವಾಪಸ್ ಆಗಿರುತ್ತಾರೆ. ಆದ್ದರಿಂದ, ದಿನಚರಿಯಲ್ಲಿ ಆ ದಿನ ಎಲ್ಲಿ ಕೆಲಸ ನಿರ್ವಹಿಸಿರುತ್ತಾರೋ ಅಲ್ಲಿಯ ದಿನಚರಿಯನ್ನು ಬರೆದು ಸಲ್ಲಿಸಿರುತ್ತಾರೆ. ಇವರಿಂದ ಅವರು ಸುಳ್ಳು ದಾಖಲೆ ಸೃಷ್ಟಿ ಅಥವಾ ಅಧಿಕಾರ ದುರುಪಯೋಗ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ.

12. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ), ಬೆಂಗಳೂರು ಇವರು ತಮ್ಮ ವರದಿಯಲ್ಲಿ ವಿನಯಚಂದ್ರ ವಲಯ ಅರಣ್ಯಾಧಿಕಾರಿ, ಬಿ.ವಿ.ಶಿವರಾಮ್ ಹಾಗೂ

ಹೆಚ್.ಸಿ.ರಮೇಶ್, ಉಪ ವಲಯ ಅರಣ್ಯಾಧಿಕಾರಿ ಇವರು ಗಂಭೀರವಾದ ಕರ್ತವ್ಯಲೋಪಗಳನ್ನು ಎಸಗಿರುವುದು ಮೇಲ್ನೋಟಕ್ಕೆ ತಿಳಿದುಬಂದಿರುತ್ತದೆಯೆಂದು ಹೇಳಿದ್ದು, ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವೃತ್ತ ಇವರಿಗೆ ಶಿಫಾರಸ್ಸು ಮಾಡಲಾಗಿರುತ್ತದೆ. ನೆನಪೋಲೆ ಹಾಕಿದರೂ ಸಹ ಸದರಿಯವರು ದೋಷಾರೋಪಣ ಪಟ್ಟಿಯನ್ನು ತಯಾರಿಸಿರುವುದಿಲ್ಲ. ನಂತರದಲ್ಲಿ ಸಲ್ಲಿಸಿರುವ ದೋಷಾರೋಪಣ ಪಟ್ಟಿ ಅಪೂರ್ಣವಾಗಿದ್ದರಿಂದ, ಅದನ್ನು ಮಾರ್ಪಾಡು ಮಾಡಲು ತಿಳಿಸಿ ಕಳುಹಿಸಿರುತ್ತಾರೆ. ಮತ್ತು ಬಿ.ವಿ.ಶಿವರಾಮ ಉಪ ವಲಯ ಅರಣ್ಯಾಧಿಕಾರಿ ಇವರು ವಯೋ ನಿವೃತ್ತಿ ಹೊಂದಿರುವುದರಿಂದ, ಸದರಿಯವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಅಲ್ಲಗಳೆಯಲು ಎದುರುದಾರರು ಸೂಕ್ತ ಸಾಕ್ಷ್ಯಾಧಾರಗಳನ್ನು ನೀಡಿರುವುದಿಲ್ಲ ಮತ್ತು ಅವರುಗಳು ಸಲ್ಲಿಸಿರುವ ಆಕ್ಷೇಪಣೆಗಳು ವರದಿಯನ್ನು ಅಲ್ಲಗಳೆಯಲು ಸಮಂಜಸವಾಗಿರುವುದಿಲ್ಲ.

13. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ಬೆಂಗಳೂರು ಇವರು ತಮ್ಮ ವರದಿಯ ಕೊನೆಯಲ್ಲಿ ಈ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ.ವಿನಯಚಂದ್ರ, ವಲಯ ಅರಣ್ಯಾಧಿಕಾರಿ, ಹೆಚ್.ಸಿ.ರಮೇಶ್, ಉಪ ವಲಯ ಅರಣ್ಯಾಧಿಕಾರಿ ಮತ್ತು ಬಿ.ವಿ.ಶಿವರಾಮ, ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರ ಇವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಅದನ್ನು ಪರಿಶೀಲಿಸಿದಾಗ, 2014 ರಿಂದ ಈವರೆಗೂ ಎದುರುದಾರರ ವಿರುದ್ಧ ಯಾವುದೇ ವಿಚಾರಣೆಯನ್ನು ನಡೆಸಲಾಗಿರುವುದಿಲ್ಲವೆಂಬ ಅಂಶ ಕಂಡುಬರುತ್ತದೆ.

14. ಮೇಲ್ಕಂಡ ಹಿನ್ನಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ. 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅಕ್ರಮವಾಗಿ ವಶಪಡಿಸಿಕೊಂಡ ನಾಟಾಗಳ ಮೌಲ್ಯವನ್ನು ವಸೂಲು ಮಾಡಿ ನಾಟಾಗಳ ನ್ಯಾಯಯುತ ಅಧಿಕಾರವುಳ್ಳ ವ್ಯಕ್ತಿಗಳಿಗೆ ನೀಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು **ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

30/1/18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**

30/1